ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: ಸಿ7(6) ಪ್ರಾ.ಶಿ.ಅ /ಆ.ಮಾ/ಪ/[ಮಧುಗಿರಿ].55 /2015-16 ದಿನಾಂಕ: 06-10-2015

## -:ಜ್ಞಾ ಪ ನಾ:-

**ವಿಷಯ** : ಘನ ಸರ್ವೋಚ್ಚ ನ್ಯಾಯಾಲಯದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ, 1994 ರ ನಂತರ ಪ್ರಾರಂಭಗೊಂಡ ಕನ್ನಡ ಮಾಧ್ಯಮದ/ಇತರೆ ಮಾಧ್ಯಮ ಶಾಲೆಗಳಿಗೆ ಆಂಗ್ಲ ಮಾಧ್ಯಮದ ಬೋಧನೆಗೆ ಅವಕಾಶ ಕೋರಿದ್ದ ಪ್ರಕರಣಗಳಲ್ಲಿ, **ಮಧುಗಿರಿ ಜಿಲ್ಲೆಗೆ** ಸಂಬಂಧಪಟ್ಟಂತೆ, 2015-16 ನೇ ಸಾಲಿನಿಂದ 1-5 ನೇ ತರಗತಿ ಆಂಗ್ಲ ಮಾಧ್ಯಮ ಬೋಧನೆಗೆ ಪರಿವರ್ತನೆ ನೀಡುವ ಬಗ್ಗೆ.

**ಉಲ್ಲೇಖ**:
1. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಎಸ್.ಎಲ್.ಪಿ.18139-18163 /2008 ಅನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಿ ಸಂವಿಧಾನ ಪೀಠಕ್ಕೆ ವರ್ಗಾವಣೆಗೊಂಡ ತರುವಾಯದಲ್ಲಿ ದಿ: 06-05-2014 ರಲ್ಲಿ ಹೊರಟಿರುವ ತೀರ್ಮ.
2. ದಿ: 06.05.2014 ರ ತೀರ್ಪಿನ ಕುರಿತು ಸಲ್ಲಿಸಲಾಗಿದ್ದ ಮರು ಪರಿಶೀಲನಾ ಅರ್ಜಿ ಸಂಖ್ಯೆ: 1878-1911/2014 ರಲ್ಲಿ ದಿ: 09.09.2014 ರಂದು ವಜಾ ಆದೇಶ. ನಂತರದಲ್ಲಿ ರಾಜ್ಯ ಸರ್ಕಾರ ದಾಖಲಿಸಿದ್ದ ಪರಿಹಾರಾತ್ಮಕ ಅರ್ಜಿಯ (Curative Petition) **ಆದೇಶ.**
3. ಸರ್ಕಾರದ ಅರೆ ಸ.ಪ.ಇಡಿ.263.ಪಿಜಿಸಿ.2015, ದಿನಾಂಕ:2-6-2015.
4. ಏಕ ಕಡತದಲ್ಲಿನ ಸರ್ಕಾರದ ಆದೇಶ ದಿನಾಂಕ:6-6-2015.
5. ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಮಧುಗಿರಿ ಜಿಲ್ಲೆ ರವರು ನೀಡಿರುವ ಪ್ರಸ್ತಾವನೆ ದಿನಾಂಕ: 22-6-2015.
6. ಏಕ ಕಡತದಲ್ಲಿನ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.359.ಪಿಜಿಸಿ.2015, ದಿನಾಂಕ:5-9-2015.

***********

1994-95 ರಲ್ಲಿ ಜಾರಿಗೊಳಿಸಲಾದ ಭಾಷಾ ನೀತಿ ಕುರಿತಂತೆ ಹಲವು ಸಂಸ್ಥೆಗಳು ಮೊದಲಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ರಿಟ್ ಅರ್ಜಿಯಲ್ಲಿ 2008ರಲ್ಲಿ ತೀರ್ಮ ಹೊರಬಿದ್ದು ನಂತರ ಸರ್ಕಾರವು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ರಜಾ ಅರ್ಜಿಯನ್ನು ದಾಖಲಿಸಿ ಅಂತಿಮವಾಗಿ ದಿನಾಂಕ : 06-05-2014 ರಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ಸಂವಿಧಾನದ ಪೀಠವು ತೀರ್ಮ ನೀಡಿದ ಮತ್ತು ಕರ್ನಾಟಕ ರಾಜ್ಯ ಘನ ಉಚ್ಚ ನ್ಯಾಯಾಲಯ ಕೆಲವು ಪ್ರಕರಣಗಳಲ್ಲಿ, ನಿಂದನಾ ದಾವೆಯು ಸೇರಿದಂತೆ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಅನುಷ್ಟಾನಗೊಳಿಸುವಂತೆ ಆದೇಶಿಸಿದೆ. ಈ ಹಿನ್ನಲೆಯಲ್ಲಿ 01 ರಿಂದ 5ನೇ ತರಗತಿಗೆ ಆಂಗ್ಲ ಮಾಧ್ಯಮದ ಪರಿವರ್ತನೆಗೆ ಸರ್ಕಾರವು ಉಲ್ಲೇಖ-3 ಮತ್ತು 4, 5 ರಲ್ಲಿ ಅನುಮತಿ ನೀಡಿರುತ್ತದೆ.

ಉಲ್ಲೇಖ-(05) ರಲ್ಲಿ ಉಪನಿರ್ದೇಶಕರು **ಮಧುಗಿರಿ ಜಿಲ್ಲೆ** ಇವರಿಂದ ಬಂದಿರುವ ಪ್ರಸ್ತಾವನೆಗಳಲ್ಲಿ ಸದರಿ ಶಾಲೆಗಳು 01 ರಿಂದ 5ನೇ ತರಗತಿಯವರೆಗೆ ಶಾಲೆಯು ಪ್ರಾರಂಭವಾದಾಗಿನಿಂದ ನಿರಂತರವಾಗಿ ನಡೆಯುತ್ತಿದ್ದು, ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ನೀಡಬಹುದೆಂದು ಉಪ ನಿರ್ದೇಶಕರು ಅಭಿಪ್ರಾಯ ನೀಡಿದ್ದಾರೆ. ಸದರಿಯವರ ಅಭಿಪ್ರಾಯ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಆದೇಶಗಳಂತೆ, **ಕೆಳಕಂಡ 06** ಶಾಲೆಗಳಿಗೆ 2015-16ನೇ ಶೈಕ್ಷಣಿಕ ಸಾಲಿನಿಂದ 01 ರಿಂದ 5ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಕೆಳಗಿನ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

1. ಎಲ್ಲಾ ಸಂಸ್ಥೆಗಳಿಂದ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳನ್ವಯ ನಮೂನೆ-3 ರಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ 01 ರಿಂದ 5ನೇ ತರಗತಿ ಕನ್ನಡ ಮಾಧ್ಯಮದ ತರಗತಿಗಳನ್ನು ನಡೆಸಲು ವಿತರಿಸಲಾಗಿದ್ದ ಮೂಲ ನೋಂದಣಿ ಪ್ರಮಾಣ ಪತ್ರವನ್ನು ಉಪನಿರ್ದೇಶಕರು 15 ದಿನಗಳೊಳಗೆ ಪಡೆದು ಸಲ್ಲಿಸಿದ ನಂತರದಲ್ಲಿ ನಮೂನೆ-4 ರಲ್ಲಿ ಆಂಗ್ಲ ಮಾಧ್ಯಮಕ್ಕೆ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರು ಶಿಫಾರಸ್ಸು ಮಾಡಿ ದೃಢೀಕರಿಸಿ ಸಲ್ಲಿಸಿರುವ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ.
3. ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳು ಹಾಗೂ ಕಾಲದಿಂದ ಕಾಲಕ್ಕೆ ಹೊರಡಿಸಲಾಗಿರುವ ಆದೇಶ/ ಸುತ್ತೋಲೆಗಳಂತೆ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಡ್ಡಾಯ ಶಿಕ್ಷಣ ಕಾಯ್ದೆ ನಿಯಮಗಳು ಜಾರಿಯಲ್ಲಿದೆ. ಅದರಂತೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸತಕ್ಕದ್ದು.
5. ಜಾರಿಯಲ್ಲಿರುವ ಶುಲ್ಕದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6. ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸಂಸ್ಥೆಯು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳತಕ್ಕದ್ದು ಹಾಗೂ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲಿಸಲಾಗುವುದು.
7. ಸಂಸ್ಥೆಯ ಯಾವುದೇ ದಾಖಲೆಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸಲ್ಲಿಕೆಯಾದ ಪ್ರಸಂಗದಲ್ಲಿ ತಪ್ಪು ಮಾಹಿತಿ ಸಲ್ಲಿಕೆಯಾಗಿರುವುದು ಗಮನಕ್ಕೆ ಬಂದಲ್ಲಿ, ತಕ್ಷಣವೆ ಏಕಪಕ್ಷೀಯವಾಗಿ ಹಾಗೂ ಯಾವುದೇ ಸಮಜಾಯಿಷಿಗೆ ಅವಕಾಶ ನೀಡದೇ ಪ್ರಸ್ತುತ ಅನುಮತಿಯನ್ನು ಹಿಂಪಡೆಯುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
8. ಉಪ ನಿರ್ದೇಶಕರು ಪರಿವರ್ತನೆಯನ್ನು ಪರಿಗಣಿಸಿ ಅಗತ್ಯ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳತಕ್ಕದ್ದು.

| ಕ್ರ.ಸಂ. | ಸಂಸ್ಥೆಯ ಹೆಸರು |
|---|---|
| 1. | ದೀಪಶ್ರೀ ಕಿರಿಯ ಪ್ರಾಥಮಿಕ ಶಾಲೆ, ಮೇಗಳಪೇಟೆ, ಸಿರಾ ಟೌನ್,ಸಿರಾ ತಾಲ್ಲೂಕು, ಮಧುಗಿರಿ ಜಿಲ್ಲೆ |
| 2. | ಶಾಂತ ಕೃಷ್ಣನ್ ಪಬ್ಲಿಕ್ ಸ್ಕೂಲ್, ಗುರುಕುಲ ಬಡಾವಣೆ, ಜ್ಯೋತಿನಗರ, ಸಿರಾ ಟೌನ್, ಮಧುಗಿರಿ ಜಿಲ್ಲೆ |
| 3. | ಉಪಕಾರ್ ಕಿರಿಯ ಪ್ರಾಥಮಿಕಸಾಲೆ, ಗಾಡಿವಾನ್ ಮೊಹಲ್ಲಾ, ಸಿರಾ ಟೌನ್, ಸಿರಾ ತಾಲ್ಲೂಕು, ಮಧುಗಿರಿ ಜಿಲ್ಲೆ |
| 4. | ವಿವೇಕ ವಿದ್ಯಾಶಾಲೆ, ಪ್ರಧಾನಅಂಚೆ ಕಛೇರಿ ಮುಂಭಾಗ, ಪಾವಗಡ ಟೌನ್ |
| 5. | ಜ್ಞಾನಜ್ಯೋತಿ ಪಬ್ಲಿಕ್ ಸ್ಕೂಲ್ ಕಿರಿಯ ಪ್ರಾಥಮಿಕಶಾಲೆ, ಬರಗೂರು, ಸಿರಾ ತಾಲ್ಲೂಕು, ಮಧುಗಿರಿ ಜಿಲ್ಲೆ |
| 6. | ಕದಂಬ ಇಂಟರ್ ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆ, ಬಾಲಾಜಿನಗರ, ಸಿರಾ ಟೌನ್ |

**ಉಪ ನಿರ್ದೇಶಕರು ವ್ಯತಿರಿಕ್ತ ಷರಾ ನೀಡಿರುವ ಪ್ರಕರಣಗಳಲ್ಲಿ 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಪರಿವರ್ತನೆಗೆ ಪರಿಗಣಿಸಲಾಗಿಲ್ಲ. ಅಂತಹ ಶಾಲೆಗಳ ಪಟ್ಟಿ ಕೆಳಗಿನಂತಿದೆ. ಉಪ ನಿರ್ದೇಶಕರು ರವರು ಈ ಶಾಲೆಗಳ ಕುರಿತಂತೆ ಪೂರಕವಾದ ದಾಖಲೆ ಹಾಗೂ ವರದಿ ಸಲ್ಲಿಸಿದಲ್ಲಿ ಪುನರ್ ಪರಿಶೀಲಿಸಲಾಗುವುದು.**

| ಕ್ರ.ಸಂ. | **1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಪರಿವರ್ತನೆಗೆ ಅನುಮತಿ ನೀಡದೇ ಇರುವ ಶಾಲೆಗಳ ಹೆಸರು ಮತ್ತು ವಿಳಾಸ** | **ಸೂಕ್ತ ದಾಖಲೆಗಳಿಲ್ಲದೆ ಹಿಂದಿರುಗಿಸಿರುವ ಪ್ರಕರಣಗಳು** |
|---|---|---|
| 1 | ಲಾಲ್ ಬಹುದ್ದೂರ್ ಶಾಸ್ತ್ರಿ ಕಿರಿಯ ಪ್ರಾಥಮಿಕ ಶಾಲೆ, ಹೊಳವನಹಳ್ಳಿ, ಕೊರಟಗೆರೆ ತಾಲ್ಲೂಕು, ಮಧುಗಿರಿ ಜಿಲ್ಲೆ | ಮಾನ್ಯತೆ ನವೀಕರಣದ ಪ್ರತಿ ಸಲ್ಲಿಸಿರುವುದಿಲ್ಲ |
| 2 | ಕಾರ್ಡಿನಲ್ ಕಿರಿಯ ಪ್ರಾಥಮಿಕಶಾಲೆ, ಅಕ್ಕಿರಾಂಪುರ, ಕೊರಟಗೆರೆ ತಾಲ್ಲೂಕು, ಮಧುಗಿರಿ ಜಿಲ್ಲೆ | ಮಾನ್ಯತೆ ನವೀಕರಣದ ಪ್ರತಿ ಸಲ್ಲಿಸಿರುವುದಿಲ್ಲ |
| 3 | ಧರ್ಮಶ್ರೀ ಪಬ್ಲಿಕ್ ಸ್ಕೂಲ್, ಶ್ರಾವಂಡನಹಳ್ಳಿ, ಮಧುಗಿರಿ ತಾಲ್ಲೂಕು ಮತ್ತು ಜಿಲ್ಲೆ | ಮಾನ್ಯತೆ ನವೀಕರಣದ ಪ್ರತಿ ಸಲ್ಲಿಸಿರುವುದಿಲ್ಲ |

| ಕ್ರ.ಸಂ. | 1 ರಿಂದ 5ನೇ ತರಗತಿ ಆಂಗ್ಲ ಮಾಧ್ಯಮ ಪರಿವರ್ತನೆಗೆ ಅನುಮತಿ ನೀಡದೇ ಇರುವ ಶಾಲೆಗಳ ಹೆಸರು ಮತ್ತು ವಿಳಾಸ | ಸೂಕ್ತ ದಾಖಲೆಗಳಿಲ್ಲದೆ ಹಿಂದಿರುಗಿಸಿರುವ ಪ್ರಕರಣಗಳು |
|---|---|---|
| 4 | ಸಾಯಿಲಲಿತ ಕಿರಿಯ ಪ್ರಾಥಮಿಕಶಾಲೆ,ಕಣೇವೇನಹಳ್ಳಿ ಗೇಟ್, ಪಾವಗಡ ಟೌನ್, ಮಧುಗಿರಿ ಜಿಲ್ಲೆ | ಪ್ರಸಕ್ತ ಸಾಲಿನವರೆಗೂ ಮಾನ್ಯತೆ ನವೀಕರಿಸಿರುವುದಿಲ್ಲ |
| 5 | ಸಾಯಿ ವಿದ್ಯಾನಿಕೇತನ ಕಿರಿಯ ಪ್ರಾಥಮಿಕಶಾಲೆ, ಪಾವಗಡ ಟೌನ್, ಮಧುಗಿರಿ ಜಿಲ್ಲೆ | ಶಾಲಾ ನೋಂದಣಿಯಲ್ಲಿ ಸಾಯಿ ವಿದ್ಯಾನಿಕೆತನ ಕಿಪ್ರಾಶಾಲೆ ಎನ್ನುವ ಬದಲಿಗೆ ಸ್ವಾಮಿ ವಿದ್ಯಾನಿಕೇತನ ಕಿಪ್ರಾಶಾಲೆ ಎಂಬುದಾಗಿ ತಪ್ಪಾಗಿ ನಮೂದಾಗಿರುತ್ತದೆ |
| 6 | ಪ್ರಾರ್ಥನಾ ವಿದ್ಯಾ ವಿಕಾಸ ಮಂದಿರ ಕಿರಿಯ ಪ್ರಾಥಮಿಕ ಶಾಲೆ, ಗುಂಡಾರ್ಲಹಳ್ಳಿ, ಪಾವಗಡ.ತಾ, ಮಧುಗಿರಿ ಜಿಲ್ಲೆ | 2005-06ನೇ ಸಾಲಿನವರೆಗೂ ನವೀಕರಿಸಿದ್ದು ಪ್ರಸಕ್ತ ಸಾಲಿನವರೆಗೂ ಮಾನ್ಯತೆ ನವೀಕರಿಸಿರುವುದಿಲ್ಲ |
| 7 | ಪೂನಂ ಕಿರಿಯ ಪ್ರಾಥಮಿಕ ಶಾಲೆ, ಪ್ರಮುಖ ರಸ್ತೆ, ಸಿರಾ ಟೌನ್,ಸಿರಾ ತಾಲ್ಲೂಕು, ಮಧುಗಿರಿ ಜಿಲ್ಲೆ | ಮಾನ್ಯತೆ ನವೀಕರಣದ ಪ್ರತಿ ಸಲ್ಲಿಸಿರುವುದಿಲ್ಲ |
| 8 | ಪ್ರಿಯದರ್ಶಿನಿ ಕಿರಿಯ ಪ್ರಾಥಮಿಕಸಾಲೆ, ದ್ವಾರನಕುಂಟೆ, ಸಿರಾ ತಾಲ್ಲೂಕು, ಮಧುಗಿರಿ ಜಿಲ್ಲೆ | 1. ಶಾಲಾ ನೋಂದಣಿ ಪ್ರತಿಸಲ್ಲಿಸಿರುವುದಿಲ್ಲ<br>2. ಶಾಲೆಯಲ್ಲಿ ಕೇವಲ 13 ಮಕ್ಕಳು ಇರುತ್ತಾರೆ ಆದುದರಿಂದ ಪರಿಗಣಿಸಲು ಅವಕಶವಿರುವುದಿಲ್ಲ |
| 9 | ಬುದ್ದಾ ಕಿರಿಯ ಪ್ರಾಥಮಿಕ ಶಾಲೆ, ಅಸ್ಸಾರ ಮೊಹಲ್ಲಾ,, ಸಿರಾ ತಾಲ್ಲೂಕು, ಮಧುಗಿರಿ ಜಿಲ್ಲೆ | ಉಪನಿರ್ದೇಶಕರು ಶಿಫಾರಸ್ಸು ಮಾಡಿರುವುದಿಲ್ಲ |
| 10 | ಜೈ ಗುರುದೇವ ರೆಸಿಟೆನ್ಸಿಯಲ್ ಕಿರಿಯ ಪ್ರಾಥಮಿಕ ಶಾಲೆ,ರೆಡ್ಡಿ ಕಾಲೋನಿ, ಪಾವಗಡ.ತಾ ಮಧುಗಿರಿ ಜಿಲ್ಲೆ | ಮಾನ್ಯತೆ ನವೀಕರಣದ ಪ್ರತಿ ಸಲ್ಲಿಸಿಲ್ಲ |

6/X/15

(ಕೆ.ಎಸ್.ಸತ್ಯಮೂರ್ತಿ)
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

6/10/15

ಗೆ,

1. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಧುಗಿರಿ ಜಿಲ್ಲೆ,,
2. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
3. ಸಂಬಂಧಿಸಿದ ಸಂಸ್ಥೆಗಳ ಕಾರ್ಯದರ್ಶಿಗಳಿಗೆ,
4. ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಗೆ,
5. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ವಹಿಸುವುದು.
6. ಕಛೇರಿ ಪ್ರತಿ.